ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸದಸ್ಯರಿಗೆ ನನ್ನ ಉತ್ತರದಿಂದ ಸಮಾಧಾನವಾಗದಿದ್ದರೆ ಇದನ್ನು ಅರ್ಧ ಗಂಟೆ ಚರ್ಚೆಗೆ ಪರಿವರ್ತಿಸಿ. ಎಲ್ಲರಿಗೂ ಆಗ ಅನುಕೂಲವಾಗುತ್ತದೆ.

(ಗೊಂದಲ)

MR SPEAKER.—Nothing will go on Record.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಂಡಲ್ ಪಂಚಾಯಿತಿಗಳಲ್ಲಿ ಅಷ್ಟೇ ಅಲ್ಲ, ಜಿಲ್ಲಾಪರಿಷತ್‌ನಲ್ಲೂ ಕೂಡಾ...

(ಗೊಂದಲ)

ಶ್ರೀ ಧರ್ಮಸಿಂಗ್.—ಎಲ್ಲಿಯ ಹಣ? ಏನು ಹೇಳುತ್ತೀರಿ...

(ಗೊಂದಲ)

MR. SPEAKER.—Mr. Dharmasingh, whatever you say will not be recorded.

(ಗೊಂದಲ)

ನಿಮ್ಮ ಡೆಪ್ಯುಟಿ ಲೀಡರ್‌ಅರ್ಧ ಗಂಟೆ ಚರ್ಚೆಗೆ ಅವಕಾಶ ಕೇಳಿದ್ದಾರೆ ಅವರೂ ಕೂಡ ಒಪ್ಪಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನೂ ಕೂಡಾ ಟೂರ್ ಹೋಗಿ ಬಂದಿದ್ದೇನೆ. ಅಲ್ಲಿನ ಒಬ್ಬಂದಿ ವರ್ಗದವರಿಗೆ ಸಂಬಳ ಕೊಡಲು ಹಣ ಇಲ್ಲ. ಯಾವುದೋ ಮನೆಯಲ್ಲಿಕಛೇರಿ ನಡೆಯುತ್ತಿದೆ. ಅಲ್ಲಿಯ ಅವಲಕ್ಷಣ, ಅವಾಂತರವನ್ನು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ಒಂದು ಗಂಟೆ ಅಲ್ಲ, ಒಂದು ದಿವಸ ಚರ್ಚೆ ಮಾಡಿದರೂ ಏನೂ ಆಗುವುದಿಲ್ಲ.

ಶ್ರೀ ಧರ್ಮಸಿಂಗ್.—ಜವಾಬ್ದಾರಿಯನ್ನು ಅರಿತು....

(ಗೊಂದಲ)

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾನು ಏನೆಲ್ಲಾ ಈ ಸದನದಲ್ಲಿ ಹೇಳಿದ್ದೇನೆ ಅದನ್ನೆಲ್ಲಾ ಪೂರ್ಣ ಜವಾಬ್ದಾರಿಯಿಂದಲೇ ಹೇಳಿದ್ದೇನೆ.

(ಗೊಂದಲ)

MR. SPEAKER. Nothing will go on record. We will take up the next question.

ತಾಲ್ಲೂಕು ಪಂಚಾಯಿತಿಗಳ ಕಾರ್ಯ ನಿರ್ವಹಣೆ

೫೦(೧೩೪) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ೧೯೮೬ನೇ ಜುಲೈ ಅಂತ್ಯದವರೆಗೆ ತಾಲ್ಲೂಕು ಪಂಚಾಯಿತಿ ಸಭೆ ಒಂದೂ ನಡೆಯದೆ ಇರುವ ತಾಲ್ಲೂಕುಗಳ ಸಂಖ್ಯೆ ಎಷ್ಟು ?

ಆ) ಅಧಿಕೃತವಾಗಿ ಸರ್ಕಾರದಿಂದ ''ತಾಲ್ಲೂಕು ಪಂಚಾಯಿತಿ'' ಸಭೆ ನಡೆಸುವ ಬಗ್ಗೆ ಆದೇಶ ಹೊರಡಿಸಲಾಗಿದೆಯೇ ?

ಇ) ಮಂಡಲ ಪಂಚಾಯಿತಿ ಸಭೆಗಳಿಗೆ ಅದಕ್ಕೆ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನ ಸದಸ್ಯರನ್ನು ಆಹ್ವಾನ ನೀಡುವಂತೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಆದೇಶವೇನಾದರೂ ಸರ್ಕಾರದವರು ನೀಡಿದ್ದಾರೆಯೇ ?

ಈ) ಶಾಸಕರುಗಳಿಗೆ ಕ್ಷೇತ್ರಾಭಿವೃದ್ಧಿ ಜಿ ಪುಗಳನ್ನು ತಾಲ್ಲೂಕಿನ ಜನತೆಯ ಸಮಸ್ಯೆ ತಿಳಿಯಲು ಉಪಯೋಗಿಸಲು ಅಧಿಕಾರಿ ಕೊಟ್ಟ ನಂತರ ಇದಕ್ಕಾಗಿ ಪೆಟ್ರೋಲ್ ಮತ್ತು ಡೀಸೆಲ್‌ಗೆ ಹಣ ಖರ್ಚು ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ತಾಲ್ಲೂಕು ಪಂಚಾಯಿತಿ ಸಮಿತಿಗಳ ರಚನೆಗಳು ಜುಲೈ ತಿಂಗಳಿಂದ ಆಗಿರುವುದರಿಂದ ಯಾವ ತಾಲ್ಲೂಕಿನಲ್ಲೂ ಈ ಸಮಿತಿಗಳು ಜುಲೈ ತಿಂಗಳಲ್ಲಿ ಸಭೆ ಸೇರಲಿಲ್ಲ.

ಅ) ಇಲ್ಲ.

ಇ) ಇಲ್ಲ.

ಈ) ಕ್ಷೇತ್ರಾಭಿವೃದ್ಧಿ ಜೀಪುಗಳು ಈಗ ಜಿಲ್ಲಾ ಪರಿಷತ್ತಿನ ಅಧೀನದಲ್ಲಿರುವುದರಿಂದ ಅದಕ್ಕಾಗಿ ಬೇಕಾಗುವ ಪೆಟ್ರೋಲ್ ಮತ್ತು ಡೀಸೆಲ್‌ಗಳಿಗೆ ಆಯಾ ಜಿಲ್ಲಾ ಪರಿಷತ್ತಿನವರು ಕೊಡ ಬೇಕಾಗಿರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ಪ್ರಾರ್ಥನೆ, ಜಿಲ್ಲಾ ಪರಿಷತ್ತುಗಳ ಚುನಾವಣೆಗೆ ಮುಂಚೆ ಎಷ್ಟು ಕಳಕಳಿ ಇವರಿಗೆ ಇತ್ತೊ ಅಷ್ಟು ಕಳಕಳಿ ಈಗ ಅವರಿಗೆ ಇಲ್ಲ. ತಾಲ್ಲೂಕು ಪಂಚಾಯಿತಿಗಳ ರಚನೆ ಬಗ್ಗೆ ನಾವು ಈ ರೀತಿ ಹೇಳಿದರೆ ಹೇಗೆ ? ನಾವೂ ಕೂಡಾ ೨ ಸಭೆಗಳನ್ನು ಮಾಡಿದ್ದೇವೆ. ಅಧಿಕೃತವಾಗಿ ಏನು ತಾಲ್ಲೂಕು ಪಂಚಾಯಿತಿಗಳ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಬೇಕಾಗಿತ್ತೋ ಅದನ್ನು ಇದುವರೆಗೂ ೬ ತಿಂಗಳು ಆದರೂ ಹೊರಡಿಸಿಲ್ಲ. ಜಿಲ್ಲಾಪರಿಷತ್ತುಗಳ ಚುನಾವಣೆಗೆ ಮುಂಚೆ ರಾಷ್ಟ್ರಪತಿಗಳ ಒಪ್ಪಿಗೆದೊರೆಯುವುದು ಸ್ವಲ್ಪ ತಡವಾದಾಗ ರಾಷ್ಟ್ರಪತಿ ಭವನದ ಮುಂದೆ ಉಪವಾಸ ಮಾಡುತ್ತೇವೆಂದು ಹೇಳಿದ ನೀವು ಈಗ ಏಕೆ ಈ ರೀತಿ ಉತ್ತರ ಕೊಡುತ್ತಿದ್ದೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಧ್ಯಕ್ಷರೇ, ಶಾಸನದ ನಿಯಮಗಳ ಪ್ರಕಾರ ಆಯಾಯ ಜಿಲ್ಲಾಪರಿಷತ್ತುಗಳಿಂದ ಮಾಹಿತಿ ಬರಬೇಕಾಗುತ್ತದೆ. ತಾಲ್ಲೂಕು ಸಮಿತಿಗಳ ಬಗ್ಗೆ ನೋಟಿಫಿಕೇಷನ್ ಮಾಡತಕ್ಕ ಸಮಯದಲ್ಲಿ ಮಂಡಲದ ಪ್ರಧಾನರ ಪೂರ್ಣ ವಿಳಾಸ ಬೇಕಾಗುತ್ತದೆ.

(ಗೊಂದಲ)

Mr. SPEAKER.—Whatever Mr. Dharam Singh says will not go to record.

(INTERRUPTIONS)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಂಡಲ ಪಂಚಾಯಿತಿಗಳ ಚುನಾವಣೆಯಾಗಿ ಆರು ತಿಂಗಳುಗಳಾಯಿತು. ಯಾವ್ಯಾವ ಸದಸ್ಯರುಗಳು ಆರಿಸಿಬಂದಿದ್ದಾರೆಂದು ಅಧಿಕೃತವಾಗಿ ನೋಟಿಫಿಕೇಷನ್ ಹೊರಡಿಸಲಿಕ್ಕೆ ಏನಾಗಿದೆ ? ಶಿವಮೊಗ್ಗ ತಾಲ್ಲೂಕು ಪಂಚಾಯಿತಿಗಳಲ್ಲಿ ಸಭೆಗಳನ್ನು ಕರೆಯಲಿಕ್ಕೆ ಮನ್ನಣೆ ಸಿಕ್ಕಿಲ್ಲ. ನೋಟಿಫಿಕೇಶನ್ ಮಾಡಿದ್ದಿದ್ದರೆ ಅವರು ಯಾವರೀತಿ ಕಾರ್ಯ ನಿರ್ವಹಿಸಬೇಕು ? ಏತಕ್ಕೋಸ್ಕರಡಿಲೆಯಾಗಿದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ನೋಟಿಫಿಕೇಶನ್ ಹೊರಡಿಸದೇ ಇರುವುದಕ್ಕೆ ಕಾರಣ ಏನೆಂದರೆ, ನಮ್ಮ ಶಾಸನದ ಪ್ರಕಾರ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು ನೋಟಿಫಿಕೇಶನ್ ಹೊರಡಿಸಬೇಕಾಗುತ್ತದೆ. ನಾನು ಮಂತ್ರಿಯಾಗಿದ್ದರೂ ಸಹ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೇಳುತ್ತೇವೆ. ಮಂತ್ರಿಯಾಗಿದ್ದರೂ ಸಹಿತ ಯಾವುದೇ ಶೀರ್ಷಾನ ತೆಗೆದುಕೊಳ್ಳಬೇಕಾದರೂ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಬೇಕು ಆಮೇಲೆ ಮಾಡಬೇಕು. ಪ್ರತಿಯೊಂದು ಜಿಲ್ಲಾಪರಿಷತ್‌ಗಳ ಅಭಿಪ್ರಾಯಗಳನ್ನು ತರಿಸಿ ನೋಟೀಫಿಕೇಶನ್ ಮಾಡಬೇಕೆಂದು ಅಲ್ಲಿಂದ ಅಭಿಪ್ರಾಯ ಬಂತು. ಅಭಿಪ್ರಾಯಗಳು ಬಂದ ತಕ್ಷಣ ಸಹಿಮಾಡಿ ನೋಟಿಫಿಕೇಶನ್ ಇಸ್ಯೂ ಮಾಡಬೇಕೆಂದು ಬರೆದಿದ್ದೇವೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಅವರ ಕಾಲದಲ್ಲಿ ಲಾ-ಡಿಪಾರ್ಟ್‌ಮೆಂಟಿನ ಅಭಿಪ್ರಾಯವನ್ನು ಕೇಳುವ ಅಭ್ಯಾಸವಿರಲಿಲ್ಲ.

(ಗೊಂದಲ)

ಅಧ್ಯಕ್ಷರು.—ಈ ತರಹ ಎದ್ದೆದ್ದು ಮಾತಾಡಿದರೆ ರೆಕಾರ್ಡ್ ಆಗುವುದಿಲ್ಲ. ಪತ್ರಿಕೆಗಳಿಗೆ ಕೂಡ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲಾ-ಡಿಪಾರ್ಟ್‌ಮೆಂಟ್‌ನ್ನು ಕೇಳಿ ಕೇಳಿ ಅದನ್ನು ಅನ್-ಲಾಫುಲ್ ಮಾಡುತ್ತೀರಿ.

ಅಧ್ಯಕ್ಷರು.—ಇದು ಮಾನ್ಯ ಯಡಿಯೂರಪ್ಪನವರ ಪ್ರಶ್ನೆ ಇದೆ. ಅವರಿಗೆ ಉತ್ತರ ಕೊಡುತ್ತಾರೆ. ನಾನು ನಿಮ್ಮನ್ನು ಅಲೋ ಮಾಡುವುದಿಲ್ಲ. ಮಾನ್ಯ ನಾಯಕ್‌ರವರೇ ತಾವು ಕುಳಿತುಕೊಳ್ಳಿ ನೀವು ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

SRI DHARM SINGH.—It is an important question.

MR. SPEAKER.—I have not allowed you to speak. Whatever you say will not go to record.

(INTERRUPTIONS)

ಶ್ರೀ ಆರ್. ಎಲ್. ಜಾಲಪ್ಪ.—ಪ್ರತಿಯೊಂದು ವಿಷಯಕ್ಕೂ ಎದ್ದೆದ್ದು ಪ್ರಶ್ನೆ ಕೇಳುವುದಾದರೆ, ಸಭೆಯ ಸಡವಳಿಕೆಯನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರಶ್ನೋತ್ತರ ವೇಳೆ ಇರುವುದು ಒಂದು ಗಂಟೆ ಮಾತ್ರ. ಒಂದು ಗಂಟೆ ಆದಮೇಲೆ ಮುಕ್ತಾಯ ಮಾಡಬೇಕಾಗುತ್ತದೆ. ಸಭೆಯಲ್ಲಿ ಪ್ರತಿಯೊಂದು ವಿಷಯಕ್ಕೂ ಗಲಾಟೆ ಮಾಡಿದರೆ ಸಭೆಯು ಕಾರ್ಯಕಲಾಪಗಳು ನಡೆಯುವುದು ಹೇಗೆ ? ಒಂದೇ ಸಾರಿ ೧೦-೧೫ ಜನ ಸದಸ್ಯರು ಎದ್ದು ಮಾತನಾಡಿದರೆ ಇದೇನು ಸಂತೆಯೇನು ? ಒಂದು ಡಿಸಿಪ್ಲೀನ್ ಇರಬೇಕಾಗುತ್ತದೆ. ತಾವು ಅದನ್ನು ಮೆಯಿಂಟೇನ್ ಮಾಡಬೇಕು.

ಶ್ರೀ ಧರ್ಮಸಿಂಗ್.—ಮಾನ್ಯ ನಜೀರ್‌ಸಾಬ್‌ರವರು ನೇರವಾಗಿ ನನಗೆ ಹೇಳಿದ್ದಾರೆ ನಾನು ಅದಕ್ಕೆ ಹೇಳಬೇಕಾಗುತ್ತದೆ.

ಶ್ರಮತಿ ಕೆ. ಎಸ್. ನಾಗರತ್ನಮ್ಮ.—ಇದೇ ಸಭೆಯಲ್ಲಿ ಸದಸ್ಯರುಗಳು ಪ್ರಶ್ನೆ ಹಾಕುವ ಬಗ್ಗೆ ಮಾನ್ಯ ಜೆ. ಎಚ್. ಪಟೇಲ್‌ರವರು ಹೇಳಿಕೊಡುತ್ತಾರೆ. ಮಾನ್ಯ ಜಾಲಪ್ಪನವರು ಡಿಸಿಪ್ಲೀನ್‌ನ ಬಗ್ಗೆ ಹೇಳುತ್ತಿದ್ದಾರೆ. ತಾವು, ನಾವು ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲವೆಂದು ಪಾಠ ಹೇಳುತ್ತೀರಿ. ಆ ಕಡೆಯವರು ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಾದರೆ ನಾವು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರ ಅಷ್ಟು ಪ್ರಶ್ನೆಗಳನ್ನು ತಡೆಹಿಡಿಯುತ್ತೇನೆ. ಅವರು ಸರಿಯಾಗಿ ಓದಿಕೊಂಡು ಬರಲಿ ನೀವೂ ಓದಿಕೊಂಡು ಬನ್ನಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾನು ಉತ್ತರವನ್ನು ಹೇಳುವುದಕ್ಕೆ ತಯಾರಾಗಿ ಬಂದಿದ್ದೇನೆ. ಅವರು ಬೇರೆ ಬೇರೆ ಪ್ರಶ್ನೆಗಳನ್ನು ಕೇಳಿದರೆ ನಾನು ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಪ್ರಶ್ನೆಗೆ ಸಂಬಂಧಪಟ್ಟಹಾಗೆ ಪ್ರಶ್ನೆಗಳನ್ನು ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಇದಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನೇ ನಾವು ಕೇಳುತ್ತಿರುವುದು. ಉತ್ತರ ಇಲ್ಲದಿದ್ದರೆ ಇಲ್ಲವೆಂದು ಹೇಳಿಬಿಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಬೇರೆ ಪ್ರಶ್ನೆಯನ್ನು ಕೇಳಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ದಯವಿಟ್ಟು ತಾವು ಹೇಳಿ. ಅವರು ಮಾತನಾಡಿದ್ದು ಅಷ್ಟೇ ರೆಕಾರ್ಡಿಗೆ ಹೋಗುತ್ತದೆ ಎಂದು ಹೇಳಿದರೆ ಹೇಗೆ?

ಅಧ್ಯಕ್ಷರು.—ನಾನು ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾವು ಬಾಯಿಗೆ ಬೆಟ್ಟು ಇಟ್ಟು ಕೊಳ್ಳುತ್ತೇವೆ. ನೀವು ತೆಗೆಯಬೇಕೆಂದು ಹೇಳುವವರೆಗೆ ತೆಗೆಯುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಗೊಂದಲದ ಮಧ್ಯೆ ನನ್ನದು ಪ್ರಮುಖವಾದ ಪ್ರಶ್ನೆ ಇದೆ. ಶಾಸಕರು ತಾಲ್ಲೂಕು ಪಂಚಾಯಿತಿ ಸಭೆಗಳಲ್ಲಿ...

ಶ್ರೀ ಅಬ್ದುಲ್ ನಜೀರ್‌ಸಾಬ್.—ಇಲ್ಲಿ ಇಶ್ಯೂ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಕೇಳುತ್ತಿರುವುದು ಮಂಡಲ ಪಂಚಾಯ್ತಿ ಸಭೆಗಳಿಗೆ, ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನ ಸದಸ್ಯರಿಗೆ ಆಹ್ವಾನ ನೀಡುವಂತೆ ಆದೇಶವನ್ನು ಹೊರಡಿಸಲಾಗಿದೆಯೆ ಎಂದು. ಅದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ನಾನು ಶಾಸಕನಾಗಿ ಕೇಳುವುದು ಬೇಡವೆ? ಈಗಾಗಲೇ ಆರು ತಿಂಗಳಾಯಿತು. ಈಗಲಾದರೂ ಇನ್ನು ಹದಿನೈದು ದಿವಸಗಳಲ್ಲಿ ಅಧಿಕೃತವಾಗಿ ಮಂಡಲ ಪಂಚಾಯ್ತಿ ಸಭೆ ನಡೆಸುವುದಕ್ಕೆ ಆಜ್ಞೆ ಹೊರಡಿಸುತ್ತೀರಾ? ತಾಲ್ಲೂಕು ಪಂಚಾಯಿತಿ ಸಭೆ ನಡೆಸುವುದರ ಬಗ್ಗೆ ಅಧಿಕೃತ ಆಜ್ಞೆಯನ್ನು ಯಾವಾಗ ಹೊರಡಿಸುತ್ತೀರಿ? ಎರಡನೆಯದು ತುಂಬಾ ಮಹತ್ವದ ವಾದದ್ದು. ಜಿಲ್ಲಾಪರಿಷತ್ತಿನ ಸದಸ್ಯರು ಜಿಲ್ಲಾಪರಿಷತ್ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಅನೇಕ ವಿಷಯಗಳನ್ನು ಅವರು ಪಾಪಸ್ಸು ಮಂಡಲ್ ಪಂಚಾಯತಿಗಳಿಗೆ ಬಂದು ಹೇಳಿದರೆ ಉಪಯೋಗ ಆಗುತ್ತದೆ. ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನ ಸದಸ್ಯರಿಗೆ ಆಹ್ವಾನ ನೀಡುವಂತೆ ಆದೇಶ ಹೊರಡಿಸುತ್ತೀರ? ವೋಟಿಂಗ್ ಪವರ್ ಕೊಡುವುದು ಬೇಡ ಇದರ ಬಗ್ಗೆ...

ಅಧ್ಯಕ್ಷರು.—ಉತ್ತರ ಇಲ್ಲವೆಂದು ಹೇಳಿದರೆ ತಮ್ಮ ಪ್ರಶ್ನೆಯನ್ನು ತಡೆಹಿಡಿಯುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ನಾಗರತ್ನಮ್ಮ.—ಅಧ್ಯಕ್ಷರೆ,...

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ನಾಳೆ ಉತ್ತರ ಕೊಡಿಸುತ್ತೇನೆ. ೧೨ ಗಂಟೆಗೆ ಮಂತ್ರಿಗಳು ಹೋಗಬೇಕಾಗಿದೆ.

(ಗೊಂದಲ)

ಶ್ರೀ ಅಬ್ದುಲ್ ನಜೀರಸಾಬ್.—ಕೇಳುವ ತಾಳ್ಮೆ ಇಲ್ಲದಿದ್ದರೆ ನಾನು ಏನು ಹೇಳಲಿ? ಎಲ್ಲಾ ತಾಲ್ಲೂಕು ಪಂಚಾಯಿತಿ ಸಮಿತಿಗಳನ್ನು ರಚನೆ ಮಾಡಿ ಆಜ್ಞೆಯನ್ನು ಹೊರಡಿಸಲಾಗಿದೆ. ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದೇನೆ. ನಿಮಾನ ಏಕೆ, ಆಯಿತು ಎಂದರೆ ಉತ್ತರ ಹೇಳುವುದಕ್ಕೆ ಇಷ್ಟೂ ಚರ್ಚೆಯಾಗಿದೆ. ಆರ್ಡರ್ ಇಶ್ಯೂ ಮಾಡಿದ್ದೇನೆ, ಬೇಕಾದರೆ ಕಾಗದವನ್ನು ಕಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಉತ್ತರದಲ್ಲಿ ಇಲ್ಲವೆಂದು ಕೊಟ್ಟಿದೀರಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—೧೯೮೬ನೇ ಜುಲೈ ಅಂತ್ಯದವರೆಗೆ ತಾಲ್ಲೂಕು ಪಂಚಾಯ್ತಿ ಸಭೆ ಒಂದೂ ನಡೆಯದೆ ಇರುವ ತಾಲ್ಲೂಕುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದೇನೆ ಈಗ ಕಾನ್ಸ್ಟಟ್ಯೂಟ್ ಆಗಿದೆ ಎಂದು ಹೇಳಿದ್ದೇನೆ. ಬೇಕಾದರೆ ನೋಡಿ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಉತ್ತರ ಕನ್‌ಫ್ಯೂಸ್ ಆಗಿದೆ. ಇದನ್ನು ವಿತ್‌ಹೆಲ್ಡ್ ಮಾಡಿ ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿತ್‌ಹೆಲ್ಡ್ ಮಾಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಂತ್ರಿಗಳು ಹಾಜರಿ ಇದ್ದಾರೆ, ಸರಿಯಾದ ಉತ್ತರ ಕೊಡುವುದಕ್ಕೆ ವ್ಯವಸ್ಥೆ ಮಾಡಿ...

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ಮಾನ್ಯ ಖರ್ಗೆಯವರೂ ಕೂಡ ವಿತ್‌ಹೆಲ್ಡ್ ಮಾಡಿ ಎಂದು ಹೇಳಿದ್ದಾರೆ. ನಿಮ್ಮ ಪ್ರಶ್ನೆಗೆ ಉತ್ತರ ಇಲ್ಲ. ವಿತ್‌ಹೆಲ್ಡ್ ಮಾಡಿದ್ದೇನೆ...

ಶ್ರೀ ಬಿ.ಎಸ್. ಯಡಿಯೂರಪ್ಪ.—ಹಾಗಾದರೆ ನಾವು ಪ್ರಶ್ನೆ ಹೇಳುವುದು ಬೇಡವೇ? ಪ್ರಶ್ನೆ ಕೇಳುವುದಕ್ಕೆ ನಮಗೆ ಅಧಿಕಾರ ಇಲ್ಲವೇ?...

ಅಧ್ಯಕ್ಷರು.—ಈಗ ನಗರಾಭಿವೃದ್ಧಿ ಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳಿ. ತಾವು ದಯವಿಟ್ಟು ಕುಳಿತುಕೊಳ್ಳಿ...

ಶ್ರೀ ಬಿ.ಎಸ್. ಯಡಿಯೂರಪ್ಪ.—ಇದನ್ನು ವಿತ್‌ಹೆಲ್ಡ್ ಮಾಡಿದ್ದೀರಾ?...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ...

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಈಗ ಮಾನ್ಯ ಯಡಿಯೂರಪ್ಪನವರ ಪ್ರಶ್ನೆ ಒಂದೇ ಅಲ್ಲ, ಚಿನ್ನಪ್ಪನವರ ಪ್ರಶ್ನೆ ಇದೆ, ಕಾನಡೆಯವರ ಪ್ರಶ್ನೆ ಇದೆ, ರಾಜುಗೌಡರ ಪ್ರಶ್ನೆ ಇದೆ, ನನ್ನದೊಂದು ಪ್ರಶ್ನೆ ಇದೆ, ಮಂಟೂರ್ ಅವರ ಪ್ರಶ್ನೆ ಇದೆ...

ಅಧ್ಯಕ್ಷರು.—ಒಟ್ಟು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಬರತಕ್ಕ ಪ್ರಶ್ನೆಗಳನ್ನು ವಿತ್‌ಹೆಲ್ಡ್ ಮಾಡಿದ್ದೇನೆ...

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ.—ಈಗಾಗಲೇ ಪ್ರಶ್ನೋತ್ತರ ಕಾಲ ಮುಗಿದಿದೆ, ಮುಂದೆ ಇನ್ನೂ ಬಹಳ ಕೆಲಸಗಳು ಇವೆ...

(ಗೊಂದಲ)

ಅಧ್ಯಕ್ಷರು.—ಈಗ ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ೧೨ ಗಂಟೆಗೆ ಕೌನ್ಸಿಲ್‌ಗೆ ಗ್ರಾಮಾಭಿವೃದ್ಧಿ ಸಚಿವರು ಹೋಗಬೇಕಾಗಿರುವುದರಿಂದ, ಅವರಿಗೆ ಅವಕಾಶ ಮಾಡಿ ಕೊಟ್ಟಿದ್ದೇನೆ. ಆದುದರಿಂದ ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ವಿತ್‌ಹೆಲ್ಡ್ ಮಾಡಿದ್ದೇನೆ. ಈಗ ಮಾನ್ಯ ಉಸ್ತಾದ್ ಅವರನ್ನು ಕರೆದಿದ್ದೇನೆ ಅವರು ಪ್ರಶ್ನೆ ಕೇಳಲಿ, ನಗರಾಭಿವೃದ್ಧಿ ಮಂತ್ರಿಗಳು ಉತ್ತರ ಹೇಳಲಿ. ತಾವೆಲ್ಲಾ ದಯವಿಟ್ಟು ಕುಳಿತುಕೊಳ್ಳಿ...

ಶ್ರೀ ಎಂ.ಎಸ್. ಕೃಷ್ಣನ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್...

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಏನು?

ಶ್ರೀ ಎಂ.ಎಸ್. ಕೃಷ್ಣನ್.—೧೪೬ ರಿಂದ ೧೫೭ರ ಪಕಿಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಶ್ನೋತ್ತರ ವೇಳೆಯಲ್ಲಿ ಬೇರೆ ವಿಷಯ ರೈಸ್ ಮಾಡುವುದಕ್ಕೆ ಹೊರಟರೆ...

ಶ್ರೀ ಎಂ.ಎಸ್. ಕೃಷ್ಣನ್.—ನನ್ನ ಪಾಯಿಂಟ್ ಆಫ್ ಆರ್ಡರ್ ಕೇಳಿರಿ...

(ಗೊಂದಲ)

ಪ್ರೊ. ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಇರುವುದಿಲ್ಲ. ತಾವು ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ.

ಅಧ್ಯಕ್ಷರು.—ನೋಡಿ ಕೃಷ್ಣನ್‌ರವರೆ, ಪಾಯಿಂಟ್ ಆಫ್ ಆರ್ಡರ್ ಏತ್ತುವುದಕ್ಕೆ ಅವಕಾಶ ಇಲ್ಲವೆಂದು ಹೇಳುತ್ತಿದ್ದಾರೆ. ನಿಮ್ಮ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಕೊಡುವುದಿಲ್ಲ. ಈಗ ಮಾನ್ಯ ಉಸ್ತಾದ್ ರವರನ್ನು ಕರೆದಿದ್ದೇನೆ. ಅವರು ಪ್ರಶ್ನೆ ಕೇಳಿದ್ದಾರೆ, ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಉತ್ತರ ಹೇಳಲಿ. ತಾವು ದಯವಿಟ್ಟು ಕೂಡಿ.

ಶ್ರೀ ಎಂ.ಎಸ್. ಕೃಷ್ಣನ್.—ಪ್ರಶ್ನೆಗಳಿಗೆ ಯಾವಾಗ ಉತ್ತರ ಕೊಡಬೇಕೆಂಬುದನ್ನು ತಾವೇ ಹೇಳಿದ್ದೀರಿ...

ಅಧ್ಯಕ್ಷರು. ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ನೀವು ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ಕೃಷ್ಣನ್.— ಪಾಯಿಂಟ್ ಆಫ್ ಆರ್ಡರ್ ಕೇಳದೇ ಹೋದರೆ ಏನು ಮಾಡುವುದು?

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್‌ಗೆ ನಾನು ಅವಕಾಶ ಕೊಡುವುದಿಲ್ಲ. ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ಕೃಷ್ಣನ್.—ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಕೊಡುವುದಿಲ್ಲ ಎಂಬುದನ್ನು ನೀವು ಹೇಗೆ ಡಿಸೈಡ್ ಮಾಡುತ್ತೀರಿ. ಅದನ್ನು ಡಿಸೈಡ್ ಮಾಡುವುದಕ್ಕೆ ನಿಮಗೆ ಅಧಿಕಾರ ಇಲ್ಲ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್‌ಗೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ ಮಂತ್ರಿಗಳು ಇಷ್ಟಬಂದಾಗ ಏದ್ದು ಹೋಗಬಹುದೇ? ಉತ್ತರ ಕೊಡುವವರು ಯಾರು?

ಶ್ರೀ. ಬಿ.ಎಸ್. ಯಡಿಯೂರಪ್ಪ.—ಬೇರೆ ಏನೋ ಹೇಳುತ್ತೇನೆ ಎಂದು ಹೇಳುತ್ತಿದ್ದಾರೆ, ಅವಕಾಶ ಕೊಡಿ ಸ್ವಾಮಿ.

ಅಧ್ಯಕ್ಷರು.—ಮಧ್ಯಾಹ್ನ ನಿಮ್ಮ ವಿಷಯ ಬರುತ್ತದೆ, ಆಗ ಮಾತನಾಡಿ ಈಗ ಕುಳಿತುಕೊಳ್ಳಿ. ಈಗನಾನು ಅವಕಾಶ ಕೊಡುವುದಿಲ್ಲ. ನಾನು ಈಗ ಎಂ.ಎಲ್. ಉಸ್ತಾದ್‌ರವರನ್ನು ಕರೆದಿರುತ್ತೇನೆ, ಅವರು ಪ್ರಶ್ನೆ ಕೇಳಬಹುದು.

ಬಿಜಾಪುರ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಬಗ್ಗೆ

೫೨ (೩೭೯) ಶ್ರೀ ಎಂ.ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬಿಜಾಪುರ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಅಂದಾಜು ಮತ್ತು ನಕ್ಷೆಗಳನ್ನು ತಯಾರು ಮಾಡಿರುವುದು ನಿಜವಲ್ಲವೇ ?

ಆ) ಕೋಲಾರ್ ಬ್ಯಾರೇಜಿನಿಂದ ಬಿಜಾಪುರ ನಗರಕ್ಕೆ ನೀರು ಸರಬರಾಜು ಮಾಡುವ ಸಲುವಾಗಿ ಇನ್ನೊಂದು ಕೊಳವೆ ಮಾರ್ಗ ಹಾಕಲು ಅಂದಾಜು ಮತ್ತು ನಕ್ಷೆಯನ್ನು ತಯಾರಿಸಿರುವುದು ನಿಜವಲ್ಲವೇ ?

ಇ) ಮೇಲೆ ಹೇಳಿರುವ ಎರಡು ಕೆಲಸಗಳು ಯಾವ ಹಂತದಲ್ಲಿದೆ ?

ಈ) ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ನಿಜ

ಆ) ನಿಜ

ಇ) ಪಟ್ಟಣದ ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿಗೊಳಿಸಲು ಸಿದ್ಧಗೊಳಿಸಲಾದ ಅಂದಾಜು ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲು ಪರಿಶೀಲಿಸಲಾಗುತ್ತಿದೆ.

ಕೋಲಾರ ಬ್ಯಾರೇಜ್‌ನಿಂದ ಬಿಜಾಪುರ ನಗರಕ್ಕೆ ನೀರು ಸರಬರಾಜು ಮಾಡುವ ಸಲುವಾಗಿ ಕೊಳವೆ ಮಾರ್ಗವನ್ನು ಹಾಕುವ ಕೆಲಸವನ್ನು ಪ್ರಾರಂಭಿಸಲಾಗಿದೆ. ಪೈಪ್‌ಲೈನ್ ಹಾಕುವ ಸಲುವಾಗಿ ೭೪೦೦ ಮೀಟರ್‌ಗಳ ಪೈಕಿ ೨೫೦೦ ಮೀಟರ್‌ಗಳ ಉದ್ದವನ್ನು ಅಗೆಯಲಾಗಿದೆ ಮತ್ತು ೧೭೦೦ ಮೀಟರ್ ಉದ್ದದ ಕೊಳವೆಗಳ ಜೋಡಣೆ ಕೆಲಸ ಮುಗಿದಿದೆ ಮತ್ತು ಉಳಿದ ಪೈಪ್‌ಲೈನ್ ಕೆಲಸ ಪ್ರಗತಿಯಲ್ಲಿದೆ. ಪಂಪ್‌ಸೆಟ್‌ನ್ನು ಕೂಡಿಸುವ ಸಲುವಾಗಿ ಜಾಕ್‌ವೆಲ್ ಮೇಲೆ ಗರ್ಡರ್ ಹಾಕುವ ಕೆಲಸ ಮುಗಿದಿದ್ದು ಜಾಕ್‌ವೆಲ್ ಮೇಲೆ ಪಂಪ್ ಹೌಸ್ ಕಟ್ಟುವ ಕೆಲಸ ಪ್ರಾರಂಭಿಸಬೇಕಾಗಿದೆ. ಪಂಪಿಂಗ್ ಮೆಷನರಿಗಳಿಗಾಗಿ ಗುತ್ತಿಗೆದಾರರನ್ನು ನೇಮಿಸಲು ಕ್ರಮ ತೆಗೆದುಕೊಂಡಿದೆ.

ಈ) ನೀರು ಸರಬರಾಜು ವ್ಯವಸ್ಥೆಯ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಅಂದಾಜು ಪಟ್ಟಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕೋಲಾರ ಬ್ಯಾರೇಜಿನಿಂದ ಪೈಪ್‌ಲೈನ್ ಹಾಕುವ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಸೂಚನೆ ನೀಡಿ ನೀರಾವರಿ ಇಲಾಖೆ ಹಾಗೂ ಬಿಜಾಪುರ ನಗರ ಸಭೆಯವರಿಂದ ಠೇವಣಿ ಹಣವನ್ನು ಪಡೆದು ಕೆಲಸವನ್ನು ಕೂಡಲೇ ಪ್ರಾರಂಭಿಸುವಂತೆ ಆದೇಶ ನೀಡಿದ್ದು ಅದರಂತೆ ಮಂಡಲಿಯು ಕೆಲಸವನ್ನು ಕೈಗೆತ್ತಿಕೊಂಡಿದೆ.